# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ 436/2014

| ಚಾಸಾ ಃ | 1 | ಪ್ರಾಸಾಃ- | 1 |
|---|---|---|---|

| | |
|---|---|
| ಹೆಸರು | ತಾಯಮ್ಮ |
| ತಂದೆಯ ಹೆಸರು / ಗಂಡನ ಹೆಸರು | ಗುಂಡೇಗೌಡ |
| ವಯಸ್ಸು | 50 |
| ಉದ್ಯೋಗ | ಕೂಲಿ ಕೆಲಸ |
| ವಿಳಾಸ | ದೊಂಗನಹಳ್ಳಿದೊಡ್ಡಿ ಗ್ರಾಮ |

- - - - - - - - - - - - - - - - - - - - - - - - - - - - - -

ದಿಃ 29.08.2015 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯವಿಚಾರಣೆ ಎಪಿಪಿ ರವರಿಂದಃ-

ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನನಗೆ ಗೊತ್ತು, ಸುಮಾರು 2ವರ್ಷದ ಹಿಂದೆ ಗಲಾಟೆಯಾಗಿರುತ್ತದೆ. ದಿನಾಂಕ ಗೊತ್ತಿರುವುದಿಲ್ಲ, ಸುಮಾರು 2:30 ರಿಂದ 3:00 ಗಂಟೆ ಸಮಯದಲ್ಲಿ ದಾಸಪ್ಪ ರವರು ನನಗೆ ಅವಾಚ್ಯ ಶಬ್ದಗಳಿಂದ ಮಾತನಾಡಿದರು, “ಇವಳಿಗೆ ಯಾರು ದಿಕ್ಕಿ ಇಲ್ಲ, ಹೊಡೆಯಿರಿ, ಬಡೆಯಿರಿ, ಬಡ್ಡಿಗೆ ಹೊಡೆದು ಸಾಯಿಸಿದರೆ ಕೇಳುವವರು ಯಾರು ಇಲ್ಲ” ಎಂದು ದಾಸಪ್ಪ ಅವನ ಹೆಂಡತಿಯಾದ ರಾಮಮ್ಮ, ಸೊಸೆ ವೆಂಕಟಲಕ್ಷ್ಮಿ, ಮಗ ಮುತ್ತುರಾಜು ಮತ್ತು ಶ್ರೀನಿವಾಸ್ ಮತ್ತು ಗೀತಾ ರವರಿಗೆ ನನ್ನ ಬಗ್ಗೆ ಆ ರೀತಿ ಹೇಳಿದ. ಆನಂತರ ರಾಮಮ್ಮ ವೆಂಕಟಲಕ್ಷ್ಮಿ ಗೀತಾ ನನ್ನ ಜುಟ್ಟನ್ನು ಹಿಡಿದುಕೊಂಡು ನನ್ನ ತಲೆಯನ್ನು ಕೆಳಗೆ ಎಳೆದು ನನಗೆ ಹೊಡೆದರು. 3ನೇ ಆರೋಪಿ ನನಗೆ ದೊಣ್ಣೆಯಿಂದ ತಲೆಯ ಬಲಭಾಗಕ್ಕೆ ಹೊಡೆದ, ನಂತರ

ಆಗ ಯಾರೋ ಬಂದು ಬಿಡಿಸಿದರು, ನನಗೆ ರಕ್ತಹರಿತ್ತಾ ಇತ್ತು, ನಾನು ಅಲ್ಲಿಂದ ಕನಕಪುರ ಸರ್ಕಾರಿ ಆಸ್ಪತ್ರೆಗೆ ಹೋದೆ, ನನ್ನ ಅಕ್ಕ ಚಿಕ್ಕತಾಯಮ್ಮ ನನ್ನನ್ನು ಆಸ್ಪತ್ರೆಗೆ ತೋರಿಸಿ, ನಾಲ್ಕು ದಿನದ ನಂತರ ದೂರನ್ನು ನಾನು ಕೊಟ್ಟಿರುತ್ತೇನೆ. ನಾನು ಆಸ್ಪತ್ರೆಯಿಂದ ಬಂದ ನಂತರ ದೂರನ್ನು ಕೊಟ್ಟಿರುತ್ತೇನೆ. ಈಗ ತೋರಿಸಿದ ದೂರಿನಲ್ಲಿ ಹೆಬ್ಬೆಟ್ಟಿನ ಗುರುತು ಇದೆ, ಸದರಿ ದೂರನ್ನು ನಿಪಿ-1, ಎಂದು ಗುರುತಿಸಲಾಯಿತು. ನಾನು ದೂರನ್ನು 5:00ಗಂಟೆಯಷ್ಟರಲ್ಲಿ ಕೊಟ್ಟೆ, 6:00ಗಂಟೆ ಪೋಲೀಸರು ಬಂದು ಮಹಜರ್ ಜರುಗಿಸಿ ನನ್ನ ಸಹಿಯನ್ನು ಪಡೆದರು. ಹಾಗೂ ಲಕ್ಷ್ಮಮ್ಮ ರವರ ಸಹಿಯನ್ನು ಪಡೆದರು. ಪೋಲೀಸರು ಮಹಜರ್‌ಗೆ ಸಹಿ ಪಡೆದುಕೊಂಡು ಹೋಗಿರುತ್ತಾರೆ. ಮುತ್ತುರಾಜ್ ರವರು ನನಗೆ ಹೊಡೆದಂತೆ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ದೊಣ್ಣೆಯಿಂದಲ್ಲೇ ಹೊಡೆದಿರುತ್ತಾನೆ. ಸದರಿ ದೊಣ್ಣೆಯನ್ನು ಎಂಒ-1 ಎಂದು ಗುರುತಿಸಲಾಯಿತು. ಮಹಜರ್ ಜರುಗಿಸಲು ಬಂದಾಗ ಸ್ಥಳದಲ್ಲಿಯೇ ದೊಣ್ಣೆ ಇತ್ತು, ಅದನ್ನು ಪೋಲೀಸರು ಅಮಾನತ್ತುಪಡಿಸಿಕೊಂಡು ಹೋದರು. ಪೋಲೀಸರು ಬರೆದುಕೊಂಡ ಮಹಜರ್‌ನ್ನು ಓದಿ ಹೇಳಿರುವುದಿಲ್ಲ. ಈಗ ತೋರಿಸಿದ ಪಂಚನಾಮೆಯಲ್ಲಿ ನನ್ನ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ. ಸದರಿ ಪಂಚನಾಮೆಯನ್ನು ನಿಪಿ-2, ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ನೀಡಲಾಯಿತು.

ಪೋಲೀಸರು ನಿಮ್ಮ ಮನೆಯ ಮುಂದೆ ಮಹಜರ್ ಮಾಡಿ ಮಹಜರ್‌ನಲ್ಲಿರುವ ವಿಷಯವನ್ನು ಓದಿ ತಿಳಿಸಿದ ನಂತರ ನಿಮ್ಮ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೀರಾ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಹೌದು ಎಂದು ನುಡಿದರು

ಪಾಟೀ ಸವಾಲು ಶ್ರೀ ಸಿಎಂಜೆ ವಕೀಲರಿಂದಃ-

ದೂರನ್ನು ಬರೆದಕೊಟ್ಟ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ದೂರನ್ನು ಬರೆದ ವ್ಯಕ್ತಿ ದೂರಿನಲ್ಲಿರುವ ವಿಷಯವನ್ನು ಓದಿ ಹೇಳಿದರು. ಆದರೆ ಈಗ ಅದನ್ನು ಮರೆತಿರುತ್ತೇನೆ. ನೀವು ಕೊಟ್ಟ ದೂರಿನಲ್ಲಿ 17.10.2013ರಂದು ಅಗಿದೆ ಎಂದು ಕೊಟ್ಟಿರುತ್ತೀರಾ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿದರು. ಗಲಾಟೆಯಾದ 6ದಿನದ ನಂತರ ದೂರನ್ನು ಕೊಟ್ಟಿರುತ್ತೀರಾ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು 4ದಿನ ನಂತರ ಕೊಟ್ಟೆ ಎಂದು ನುಡಿದರು.

ನೀವು ಆಸ್ಪತ್ರೆಗೆ 17.10.2013ರಂದು ಹೋಗಿದ್ದು ಅದೇ ದಿನ ಸಂಜೆ 5:30ರಷ್ಟರಲ್ಲಿ ವೈದ್ಯರು ನಿಮ್ಮನ್ನು ಆಸ್ಪತ್ರೆಯಿಂದ ಕಳುಹಿಸಿರುತ್ತಾರೆ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಹೌದು ಎಂದು ನುಡಿದರು. ಸರ್ಕಾರಿ ಆಸ್ಪತ್ರೆ ಮತ್ತು ಠಾಣೆ ಕನಕಪುರ ಟೌನ್‌ನಲ್ಲಿ ಇದೆ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಹೌದು ಎಂದು ನುಡಿದರು.

ನೀವು ಆಸ್ಪತ್ರೆಯಿಂದ ಬಂದು ಟೌನ್ ಪೋಲೀಸ್ ಠಾಣೆಯಲ್ಲಿ ದೂರನ್ನು ಕೊಡಬಹುದಾಗಿತ್ತು ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಅದೇ ದಿನ ಕೊಟ್ಟಿರುತ್ತೇನೆ ಎಂದು ನುಡಿದರು. ನೀವು ಸಾರಾಯಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಾ ಇದ್ದಿರಾ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು. ದಾಸಪ್ಪ ರವರು ಪೋಲೀಸರು ನೀವು ಸಾರಾಯಿ ವ್ಯಾಪಾರ ಮಾಡುತ್ತಾ ಇದ್ದ ಬಗ್ಗೆ ತಿಳಿಸಿ, ಪೋಲೀಸರ ಕಡೆಯಿಂದ ಸಾರಾಯಿ ಮಾರಾಟ ಮಾಡುವುದನ್ನು ನಿಲ್ಲಿಸಿದರು ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ, ನಾನು ಆ ರೀತಿ ಮಾರಾಟ ಮಾಡುತ್ತಿರಲಿಲ್ಲ ಎಂದು ನುಡಿದರು.

ಆ ರೀತಿ ದಾಸಪ್ಪ ರವರು ಸಾರಾಯಿ ಮಾರಾಟ ಮಾಡುವುದನ್ನು ನಿಲ್ಲಿಸಿದ ಮೇಲೆ ಅದರ ದ್ವೇಷ ಇಟ್ಟುಕೊಂಡು ದಾಸಪ್ಪ ಮತ್ತು ಅವರ ಕುಟುಂಬದ ಮೇಲೆ ಗಲಾಟೆ ಮಾಡಿ, ಸಣ್ಣಪುಟ್ಟ

ದೂರನ್ನು ಕೊಟ್ಟು ದ್ವೇಷ ಸಾಧಿಸುತ್ತಾ ಇದ್ದಿರಾ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು. ದಾಸಪ್ಪ ಮತ್ತು ಅವರ ಗಂಡುಮಕ್ಕಳು ಕಟ್ಟಡ ನಿರ್ಮಾಣ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸರಿ.

ನನ್ನ ತಲೆಗೆ ಹೊಡೆದಾಗ ರಕ್ತಸ್ರಾವವಾಗಿ ನನ್ನ ಬಟ್ಟೆಗೂ ಸಹ ರಕ್ತಕಲೆಯಾಗಿತ್ತು. ಆ ರಕ್ತಕಲೆಯಾದ ಬಟ್ಟೆಯನ್ನು ನೀವು ಪೋಲೀಸರಿಗೆ ಕೊಟ್ಟಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿಯು ಅದನ್ನು ಅವರು ಕೇಳಲಿಲ್ಲ ಎಂದು ನುಡಿದರು. ದಾಸಪ್ಪ ಮತ್ತು ಅವರ ಗಂಡು ಮಕ್ಕಳು ಆ ದಿನ ಕೆಲಸಕ್ಕೆ ಹೋಗಿದ್ದರು, ಅವರು ಅಲ್ಲಿ ಇರಲಿಲ್ಲ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು.

ಮಹಜರ್‌ಗೆ ಬಂದಾಗ 5 ರಿಂದ 6ಗಂಟೆಯಾಗಿತ್ತು. 5 ರಿಂದ 6ಗಂಟೆ ಮಹಜರ್ ಮಾಡಿರುತ್ತಾರೆ ಎಂದರೆ ಸರಿ, ಮಹಜರ್‌ನಲ್ಲಿ ಬರೆದಿರುವ ವಿಷಯವನ್ನು ಪೋಲೀಸರು ನನಗೆ ಓದಿ ತಿಳಿಸಿರುತ್ತಾರೆ. ಮಹಜರ್‌ನಲ್ಲಿ ಕೃತ್ಯಕ್ಕೆ ಉಪಯೋಗಿಸಿದಂತಹ ದೊಣ್ಣೆಯನ್ನು ಎತ್ತಿಟ್ಟಿದ್ದನ್ನು ನಮ್ಮ ಮುಂದೆ ಹಾಜರುಪಡಿಸಿರುತ್ತಾರೆ ಎಂದು ಮಹಜರ್‌ನಲ್ಲಿ ಬರೆದಿದ್ದಾರೆ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಇಲ್ಲ ಅದು ಸ್ಥಳದಲ್ಲಿಯೇ ಇತ್ತು ಎಂದು ನುಡಿದರು. ಎಂಒ-1 ಯಾವ ಜಾತಿಯ ದೊಣ್ಣೆ ಎಂದು ಹೇಳಲು ಗೊತ್ತಾಗುವುದಿಲ್ಲ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಎಂಒ-1 ದೊಣ್ಣೆ ಸಿಕ್ಕುತ್ತದೆ ಎಂದರೆ ಸರಿ, ಆರೋಪಿಗಳು ನಿಮ್ಮ ಮೇಲೆ ಹೊಡೆದಿಲ್ಲ ಮತ್ತು ಗಲಾಟೆ ಮತ್ತು ಬೈಯ್ದಿಲ್ಲ ಆದರೂ ಸಹ ನೀವು ಸುಳ್ಳು ದೂರನ್ನು ಕೊಟ್ಟಿದ್ದಿರಾ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು.

ಆರೋಪಿಗಳು ನಿಮಗೆ ಕೊಲೆ ಬೆದರಿಕೆ ಹಾಕಿಲ್ಲ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು. ನೀವು ನೀಡಿದ ದೂರು ಸುಳ್ಳು ಎಂದು ಪೋಲೀಸರು ಅದನ್ನು

ದಾಖಲು ಮಾಡಿರಲಿಲ್ಲ. ಆದರೆ ನೀವು ಎಸ್‌ಪಿ ಹತ್ತಿರ ಹೋಗಿ ಅವರ ಪ್ರಭಾವನ್ನು ಹಾಕಿಸಿರುತ್ತೀರಾ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು.

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಕನಕಪುರ.

ಓ ಹೇ ಕೇ ಸ ಇ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,
ಕನಕಪುರ

ಸಿ.ಸಿ ನಂಃ 436/2014

| | | | |
|---|---|---|---|
| ಚಾಸಾ ಃ | 4 | ಪ್ರಾಸಾಃ- | 2 |
| ಹೆಸರು | ಲಕ್ಷ್ಮಿ | | |
| ತಂದೆಯ ಹೆಸರು / ಗಂಡನ ಹೆಸರು | ಕಾಳೇಗೌಡ | | |
| ವಯಸ್ಸು | 30 | | |
| ಉದ್ಯೋಗ | ಗೃಹಿಣಿ | | |
| ವಿಳಾಸ | ದೊಂಗನಹಳ್ಳಿದೊಡ್ಡಿ ಗ್ರಾಮ | | |

- - - - - - - - - - - - - - - - - - - - - - - - - - - - -

ದಿಃ 29.08.2015 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯವಿಚಾರಣೆ ಎಪಿಪಿ ರವರಿಂದಃ-

ಚಾಸಾ-1 ರವರು ನನಗೆ ಗೊತ್ತು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನನಗೆ ಗೊತ್ತು. ಈಗ ಸುಮಾರು 2ವರ್ಷಗಳ ಹಿಂದೆ ಗಲಾಟೆಯಾಗಿರುತ್ತದೆ. ನನಗೆ ದಿನಾಂಕ ಗೊತ್ತಿರುವುದಿಲ್ಲ. ಮಧ್ಯಾಹ್ನ 2:00 ಗಂಟೆ ಸಮಯದಲ್ಲಿ ನನ್ನ ಮನೆಯ ಹತ್ತಿರ ಇರುವ ರಸ್ತೆಯಲ್ಲಿ ಹೊಡೆದಾಟ ಅಗುತ್ತಾ ಇತ್ತು. ಆಗ ನಾನು ಮನೆಯಲ್ಲಿ ಇದ್ದೆ. ದಾಸಪ್ಪ ರವರು ಬಂದು ತಾಯಮ್ಮ ರವರಿಗೆ ಹೊಡೆಯುತ್ತಾ ಇದ್ದರು. ದಾಸಪ್ಪ ರವರ ಜೊತೆ 2ನೇ ಆರೋಪಿ, 5ನೇ ಆರೋಪಿ 3ಜನ ಸೇರಿ ತಾಯಮ್ಮ ರವರಿಗೆ ಹೊಡೆದರು. ದೊಣ್ಣೆಯಲ್ಲಿ ಅವರ ಹೆಂಗಸರು ಮತ್ತು ಸೊಸೆ ಹೊಡೆದರು. ಆಗ ನಾನೇ ಹೋಗಿ ಬಿಡಿಸಿದೆ. ತಾಯಮ್ಮನ ತಲೆಗೆ ಏಟಾಗಿದ್ದು, ಆಸ್ಪತ್ರೆಗೆ ಹೋದಳು. ಪೋಲೀಸರು ನನ್ನ ಹತ್ತಿರ ವಿಚಾರಣೆ ಮಾಡಿರುವುದಿಲ್ಲ. ತಾಯಮ್ಮ ರವರಿಗೆ

ಹೊಡೆದಂತೆ ದೊಣ್ಣೆಯನ್ನು ನೋಡಿದರೆ ಗುರುತಿಸಲಾಗುವುದಿಲ್ಲ. ನಾನು ಪೋಲೀಸರಿಗೆ ಸಿಕ್ಕಿರುವುದಿಲ್ಲ ಅದ್ದರಿಂದ ನನ್ನನ್ನು ವಿಚಾರಣೆ ಮಾಡಿರುವುದಿಲ್ಲ.

ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ನೀಡಲಾಯಿತು.

ಆದಿನ ದಾಸಪ್ಪ, ರಾಮಮ್ಮ, ಮುತ್ತುರಾಜು, ಶ್ರೀನಿವಾಸ, ವೆಂಕಟಲಕ್ಷ್ಮಿ ಎಲ್ಲಾರು ಸೇರಿ ತಾಯಮ್ಮ ರವರ ಮೇಲೆ ಗಲಾಟೆ ಮಾಡಿದರು, 2 ಮತ್ತು 5ನೇ ಆರೋಪಿ ಚಾಸಾ-1 ರವರ ತಲೆಯ ಜುಟ್ಟನ್ನು ಹಿಡಿದುಕೊಂಡು ಎಳೆದಾಡಿದರು ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಹೌದು ಎಂದು ನುಡಿದರು. ಮುತ್ತುರಾಜು ರವರು ಅಲ್ಲೇ ಬಿದ್ದಿದ್ದ ದೊಣ್ಣೆಯಲ್ಲಿ ಚಾಸಾ-1 ರವರ ತಲೆಯ ಮೇಲೆ ಹೊಡೆದರು ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿದರು. ಪೋಲೀಸರು ನನ್ನನ್ನು ವಿಚಾರಣೆಯನ್ನು ಮಾಡಿ ನನ್ನ ಹೇಳಿಕೆ ಪಡೆದಿರುತ್ತಾರೆ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಹಸರಿಯಲ್ಲ. ಆರೋಪಿಗಳು ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿ,

ಪಾಟೀ ಸವಾಲು ಸಿಎಂಜೆ ವಕೀಲರಿಂದಃ-

ಗಲಾಟೆ ಸಮಯದಲ್ಲಿ ನನ್ನ ಮನೆಯ ಹತ್ತಿರ ಇದ್ದೆ, ಗಲಾಟೆ ನಮ್ಮ ಮತ್ತು ಅವರ ಮನೆ ಮದ್ಯೆ ಅಯಿತು. ಪೋಲೀಸರು ಬರೆದುಕೊಂಡ ಹೇಳಿಕೆಯಲ್ಲಿ ಗಲಾಟೆಯು ತಾಯಮ್ಮ ರವರ ಮನೆಯ ಮುಂದೆ ಅಗಿದೆ ಎಂದು ಬರೆದುಕೊಂಡಿದ್ದಾರೆಂದು ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಹೌದು ಎಂದು ನುಡಿದರು. ಚಾಸಾ-1 ರವರು ನನ್ನ ಯಜಮಾನರ ಕಡೆಯಿಂದ ಸಂಬಂಧಿ ಚಾಸಾ-1 ನನ್ನ ಅಕ್ಕ ಅಗಬೇಕು. ಆರೋಪಿ ಕುಟುಂಬದವರಿಗೆ ಮತ್ತು ಚಾಸಾ-1 ರವರಿಗೆ ಆಗುವುದಿಲ್ಲ

ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಹೌದು ಎಂದು ನುಡಿದರು. ಚಾಸಾ-1 ರವರಿಗೆ ಆರೋಪಿಗಳು ಅಗದಿರುವುದಿಲ್ಲ ಚಾಸಾ-1 ರವರು ಸುಳ್ಳು ದೂರು ಕೊಟ್ಟಿದ್ದಾರೆಂದು ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಅದು ಗೊತ್ತಿಲ್ಲ, ರಾಮಮ್ಮ ರವರಿಗೆ ಚಾಸಾ-1 ರವರಿಗೆ ಹೊಡೆದಿದ್ದಾರೆಂದು ನೀವು ಪೋಲೀಸರಿಗೆ ಹೇಳಿಲ್ಲ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ನಾನು ಪೋಲೀಸರಿಗೆ ಸಿಕ್ಕಿಲ್ಲ ಎಂದು ನುಡಿದರು. ಆರೋಪಿ ಮತ್ತು ಚಾಸಾ-1 ರವರ ಮದ್ಯೆ ಗಲಾಟೆಯಾಗಿಲ್ಲ, ಚಾಸಾ-1 ರವರು ನಿಮಗೆ ಅಕ್ಕ ಅಗಬೇಕಾದರಿಂದ ಅವರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಾ ಇದ್ದಿರಾ ಎಂದು ಸಾಕ್ಷಿಗೆ ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಕನಕಪುರ.

ಓ ಹೇ ಕೇ ಸ ಇ